# ನಿಜವಾದ ಗುರು



❁ ಇರತಕ್ಕ ಗುರು ಕೇವಲ ಒಬ್ಬನೇ ಒಬ್ಬ. ಆತನೇ ಸಚ್ಚಿದಾನಂದ. ಆತ ಮಾತ್ರವೇ ಶಿಕ್ಷಣ ಕೊಡಬಲ್ಲ. ನನ್ನದು ಸಂತಾನಭಾವ. ಮಾನವನ ಅಂತಸ್ತಿನಲ್ಲಿರುವ ಗುರುಗಳು ಲಕ್ಷಗಟ್ಟಲೆ ಸಿಗುತ್ತಾರೆ. ಎಲ್ಲರಿಗೂ ಗುರು ಆಗಬೇಕು ಅಂತ ಇಚ್ಛೆ. ಆದರೆ ಶಿಷ್ಯನಾಗಬೇಕು ಅಂತ ಯಾರಿಗೆ ತಾನೆ ಇಚ್ಛೆಯಿದೆ ?

❁ ಲೋಕಶಿಕ್ಷಣ ಬಹಳ ಕಠಿಣವಾದ ಕೆಲಸ. ಭಗವಂತ ತನ್ನ ಸಾಕ್ಷಾತ್ಕಾರ ಕೊಟ್ಟು ಆದೇಶ ನೀಯುವುದಾದರೆ ಮನುಷ್ಯ ಲೋಕ ಶಿಕ್ಷಣ ಕಾರ್ಯವನ್ನು ಮಾಡಬಲ್ಲ. ನಾರದ ಶುಕ ದೇವಾದಿಗಳಿಗೆ ಭಗವಂತನಿಂದ ಆದೇಶ ದೊರೆತಿತ್ತು. ಶಂಕರಾಚಾರ್ಯರಿಗೂ ದೊರೆತಿತ್ತು. ಆದೇಶವಿಲ್ಲದೆ ಇತ್ತು ಎಂದರೆ, ಯಾರುತಾನೇ ನಿನ್ನ ಮಾತಿಗೆ ಬೆಲೆಕೊಡುತ್ತಾರೆ ?

❁ ಸತ್ಯವಾಗಿಯೂ ಭಗವಂತ ನಮ್ಮ ಕಣ್ಣಿಗೆ ಕಾಣಿಸಿಕೊಳ್ಳುತ್ತಾನೆ, ನಮ್ಮೊಡನೆ ಮಾತುಕಡೆ ಆಡುತ್ತಾನೆ. ಆಗ ಆತನಿಂದ ಆದೇಶ ಪಡೆಯಲು ಸಾಧ್ಯ. ಆ ರೀತಿಯಾಗಿ ಆದೇಶ ಪಡೆದ ವ್ಯಕ್ತಿಯ ಬಾಯಿಂದ ಬರುವ ಮಾತಿಗೆ ಎಷ್ಟು ಬಲ ! ಪರ್ವತಗಳನ್ನೂ ಚಲಿಸಿಬಿಡಬಲ್ಲದು. ಬರಿದೆ ಉಪನ್ಯಾಸ ಯಾವುದಕ್ಕೆ ಬಂದದ್ದು? ಒಂದೆರಡು ದಿನಗಳ ಮಟ್ಟಿಗೆ ಕೇಳುತ್ತಾರೆ, ಬಳಿಕ ಮರೆತುಬಿಡುತ್ತಾರೆ. ಅದರಂತೆ ಅವರು ಎಂದಿಗೂ ನಡೆದುಕೊಳ್ಳುವುದಿಲ್ಲ.

❁ ಆ ದೇಶದಲ್ಲಿ (ಕಾಮಾರಪುಕುರದಲ್ಲಿ) ಹಾಲದಾರ ಪುಕುರ ಎಂಬ ಹೆಸರಿನ ಒಂದು ಕೆರೆ ಇದೆ. ಕೆಲವರು ಬೆಳಗಿನ ಜಾವ ಎದ್ದು ಹೋಗಿ ಏರಿ ಬಳಿ ಹೇಸಿಗೆ ಮಾಡಿಬಿಡುತ್ತಿದ್ದರು. ಅಲ್ಲಿಗೆ ಪ್ರಾತಃಕಾಲ ಸ್ನಾನಕ್ಕಾಗಿ ಬರುತ್ತಿದ್ದವರು ಬಾನು ಬಿರಿಯುವ ಹಾಗೆ ತಪ್ಪಿತಸ್ಥರನ್ನು ಬಯ್ಯುತ್ತಿದ್ದರು. ಎಷ್ಟು ಬಯ್ದರೂ ದಿನವೂ ಅದೇ ಅವಸ್ಥೆ. ಹೇಸಿಗೆ ಮಾಡುವುದು ನಿಲ್ಲದೇನೇ ಹೋಯಿತು. ಅಲ್ಲಿನ ಜನರು ತಮ್ಮ ಕಷ್ಟವನ್ನು ಸರ್ಕಾರಕ್ಕೆ ತಿಳಿಸಿದರು. ಅವರು ಅಲ್ಲಿಗೆ ಒಬ್ಬ ಜವಾನನನ್ನು ಕಳುಹಿಸಿದರು. ಆತ ಬಂದು ಅಲ್ಲಿ ಒಂದು ಸೈನ್‌ಬೋರ್ಡ್ ನೆಟ್ಟ. ಅದರಲ್ಲಿ ಬರೆದಿತ್ತು: 'ಹೇಸಿಗೆ ಮಾಡಿದವರಿಗೆ ಶಿಕ್ಷೆ ವಿಧಿಸಲಾಗುತ್ತದೆ.' ಒಡನೆಯೇ ಎಲ್ಲಾ ನಿಂತು ಹೋಯಿತು.

❁ ಲೋಕಶಿಕ್ಷಣ ಮಾಡಬೇಕಾಗಿದ್ದರೆ ಭಗವಂತನಿಂದ ಆದೇಶ ಪಡೆದುಕೊಂಡಿರಬೇಕು. ಇಲ್ಲದಿದ್ದರೆ ಅದು ಹಾಸ್ಯಾಸ್ಪದಕ್ಕೆ ಇಟ್ಟು ಕೊಳ್ಳುತ್ತದೆ. ತನಗೇ ಪರಿಪಕ್ವತೆ ತಂದುಕೊಂಡಿಲ್ಲ, ಬೇರೆಯವರಿಗೆ ಪರಿಪಕ್ವತೆ ತರಲು ಹೋಗುವುದು ! ಕುರುಡ ಕುರುಡನಿಗೆ ದಾರಿ ತೋರಿಸಿದಂತೆ! ಈ ವಿಧವಾದ ಹಿತ ವಿಪರೀತಕ್ಕಿಟ್ಟುಕೊಳ್ಳುತ್ತದೆ. ಭಗವಂತನ ಸಾಕ್ಷಾತ್ಕಾರ ಪಡೆದುಕೊಂಡ ನಂತರ ಅಂತರ್ದೃಷ್ಟಿ ಉಂಟಾಗುತ್ತದೆ; ಯಾರಿಗೆ ಏನು ಎಂಬುದು ಗೊತ್ತಾಗುತ್ತದೆ. ಆಗ ಸರಿಯಾದ ಔಷಧ ಕೊಡ ಬಹುದು.

❁ ಭಗವಂತನ ಆದೇಶ ಪಡೆದುಕೊಳ್ಳದೆ ಇದ್ದರೆ, 'ನಾನು ಲೋಕಶಿಕ್ಷಣ ಮಾಡುತ್ತಿದ್ದೇನೆ' ಎಂಬ ಅಹಂಕಾರ ಬಂದುಬಿಡುತ್ತದೆ. ಅಹಂಕಾರ ಅಜ್ಞಾನದಿಂದ ಉಂಟಾಗುತ್ತದೆ. ಅಜ್ಞಾನದಿಂದಲೇ ಅನ್ನಿಸುತ್ತದೆ, 'ನಾನು ಕರ್ತ' ಎಂಬುದಾಗಿ. 'ಭಗ ವಂತನೇ ಕರ್ತ, ಆತನೇ ಎಲ್ಲವನ್ನೂ ಮಾಡು ತ್ತಿದ್ದಾನೆ. ನಾನು ಏನನ್ನೂ ಮಾಡುತ್ತಿಲ್ಲ' ಎಂಬ ಬೋಧೆ ಮನುಷ್ಯನಿಗೆ ಉಂಟಾ ಯಿತು ಎಂದರೆ ಆತ ಜೀವನ್ಮುಕ್ತನಾಗಿಬಿಡುತ್ತಾನೆ. 'ನಾನು ಕರ್ತ, ನಾನು ಕರ್ತ' ಎಂಬ ಈ ಬೋಧೆಯಿಂದಲೇ ಮನುಷ್ಯ ಪಡುವ ಸಕಲ ದುಃಖ ದುರಿತಗಳೆಲ್ಲ ಜನ್ಮ ತಳೆಯುತ್ತವೆ.

❁ ನೀವು ಹೇಳುತ್ತೀರಿ, ಜಗತ್ತಿಗೆ ಉಪಕಾರ ಮಾಡಬೇಕು ಎಂಬುದಾಗಿ. ಜಗತ್ತೇನು ಒಂದು ಅಂಗೈಯಗಲದ್ದೆ ? ಅದೂ ಈ ಜಗತ್ತಿಗೆ ಉಪಕಾರ ಮಾಡಲು ಮೊದಲನೆಯದಾಗಿ ನೀವು ಯಾರು? ಮೊದಲು ಸಾಧನೆಮಾಡಿ ಭಗವಂತನನ್ನು ಸಾಕ್ಷಾತ್ಕಾರ ಮಾಡಿಕೊಳ್ಳಿ, ಆತನನ್ನು ಪಡೆದುಕೊಳ್ಳಿ. ಆತ ಶಕ್ತಿಯನ್ನು ಕರುಣಿಸಿದ್ದೇ ಆದರೆ ಆಗ ಎಲ್ಲರಿಗೂ ಹಿತವನ್ನು ಮಾಡಬಲ್ಲಿರಿ; ಇಲ್ಲದಿದ್ದರೆ ಸಾಧ್ಯವಿಲ್ಲ.

❁ ಆಚಾರ್ಯನ ಕೆಲಸ ಬಹಳ ಕಠಿಣವಾದ್ದು. ಭಗವಂತನಿಂದ ನೇರವಾಗಿ ಆದೇಶ ಬಾರದ ಹೊರತು ಲೋಕಶಿಕ್ಷಣ ಸಾಧ್ಯವಿಲ್ಲ. ಆದೇಶವಿಲ್ಲದೆ ಉಪದೇಶ ಕೊಟ್ಟದ್ದೇ ಆದರೆ ಯಾರೂ ಕಿವಿಗೊಡರು. ಅಂಥ ಉಪದೇಶಗಳಲ್ಲಿ ಯಾವ ಶಕ್ತಿಯೂ ಇರದು. ಸಾಧನೆಯಿಂದಾಗಲಿ ಅಥವಾ ಬೇರೆ ಯಾವ ಮಾರ್ಗದಿಂದಾಗಲಿ ಮೊದಲು ಭಗವಂತನ ಸಾಕ್ಷಾತ್ಕಾರವನ್ನು ಪಡೆದುಕೊಳ್ಳಬೇಕು. ಬಳಿಕ ಆತನ ಆದೇಶವನ್ನು ಪಡೆದುಕೊಂಡು ಲೆಕ್ಚರ್ ಕೊಡಬೇಕು.

ಶ್ರೀರಾಮಕೃಷ್ಣ ವಚನವೇದದಿಂದ